# ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ–3266/2019/ಎ.ಆರ್.ಎಲ್.ಒ–1. ದಿನಾಂಕ:30–04–2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:–** 2 ಮತ್ತು 3ನೇ ಎದುರುದಾರರಾದ ಶ್ರೀ ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೇರಿ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ಮತ್ತು ಪ್ರಭಾರ ಸಹಾಯಕ ಅಭಿಯಂತರರು ವಾರ್ಡ್ ನಂ:73 (ಕೊಟ್ಟಿಗೆಪಾಳ್ಯ), ಬಿಬಿಎಂಪಿ., ಬೆಂಗಳೂರು (2 ಮತ್ತು 3ನೇ ಎದುರುದಾರರು ಒಂದೇ ವ್ಯಕ್ತಿ ಆಗಿರುತ್ತಾರೆ) ರವರು ದುರ್ನಡತೆ ಎಸಗಿರುವ ಬಗ್ಗೆ.

******

ಶ್ರೀ ತಿಮ್ಮರೆಡ್ಡಿ, ನಂ:64/10, 3ನೇ 'ಬಿ' ಕ್ರಾಸ್, ಅಯ್ಯಣ್ಣಶೆಟ್ಟಿ ಲೇಔಟ್, ಮೈಸೂರು ರಸ್ತೆ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಎದುರುದಾರರಾದ (1) ಶ್ರೀ ಶ್ರೀನಿವಾಸ, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗ, ಬಿಬಿಎಂಪಿ., ಬೆಂಗಳೂರು, (2) ಶ್ರೀ ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೇರಿ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ಮತ್ತು (3) ಶ್ರೀ ಉಮೇಶ್ ಪ್ರಭಾರ ಸಹಾಯಕ ಅಭಿಯಂತರರು ವಾರ್ಡ್ ನಂ:73 (ಕೊಟ್ಟಿಗೆಪಾಳ್ಯ), ಬಿಬಿಎಂಪಿ., ಬೆಂಗಳೂರುರವರ ವಿರುದ್ಧ ಸಲ್ಲಿಸಿರುತ್ತಾರೆ (2 ಮತ್ತು 3ನೇ ಎದುರುದಾರರು ಒಂದೇ ವ್ಯಕ್ತಿ ಆಗಿರುತ್ತಾರೆ) (ಇನ್ನು ಮುಂದೆ '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಹಾಗೂ ಸದರಿಯವರ ವಿರುದ್ಧ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವ ಬಗ್ಗೆ ಸೂಕ್ತ ವಿಚಾರಣೆ ಮಾಡಿ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರುದಾರರ ಆಪಾದನೆ ಏನೆಂದರೆ, ಸ್ವತ್ತು ಸಂಖ್ಯೆ:13, 20ನೇ ಅಡ್ಡರಸ್ತೆ, ನಾಗರಬಾವಿ 2ನೇ ಹಂತ, ಬೆಂಗಳೂರಿನ ವಿಳಾಸದಲ್ಲಿ ಕಟ್ಟಡದ ಮಾಲೀಕರು ಅನಧಿಕೃತವಾಗಿ ತಳಪಾಯ ಮತ್ತು ಹೆಚ್ಚುವರಿ ಅಂತಸ್ತುಗಳ ಕಟ್ಟಡಗಳನ್ನು ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಸೆಟ್‌ಬ್ಯಾಕ್‌ಗಳನ್ನು ಬಿಡದೇ ಕಾನೂನು ಬಾಹಿರವಾಗಿ ಕಟ್ಟಡವನ್ನು ಕಟ್ಟುತ್ತಿದ್ದಾರೆ. ಅನುಮೋದಿತ ನಕ್ಷೆ ವಾಸಪಯೋಗಿ ಕಟ್ಟಡಕ್ಕೆ ಇದ್ದರೂ ಸಹ ವಾಣಿಜ್ಯ ಉದ್ದೇಶಕ್ಕೋಸ್ಕರ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂದು ಕಟ್ಟಡದ ಮಾಲೀಕರಿಂದ ಹಣ ಪಡೆದಿದ್ದಾರೆಂದು ಹೇಳಿರುತ್ತಾರೆ.

3. ದೂರುದಾರರು ತಮ್ಮ ದೂರಿನೊಂದಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಿರುವ ದಿನಾಂಕ: 17-8-2019 ರ ದೂರಿನ ಪ್ರತಿ ಹಾಗೂ ಕಟ್ಟಡದ ಪೋಟೋವಿನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

4. 1ನೇ ಎದುರುದಾರರಾದ ಶ್ರೀ ಶ್ರೀನಿವಾಸ್, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗ, ಬಿಬಿಎಂಪಿ.,ಬೆಂಗಳೂರು ರವರು ಮರಣ ಹೊಂದಿರುತ್ತಾರೆ ಎಂಬುದು ತಿಳಿದುಬಂದಿರುತ್ತದೆ.

5. 2 ಮತ್ತು 3ನೇ ಎದುರುದಾರರಾದ ಶ್ರೀ ಎನ್.ಜಿ. ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೇರಿ ಉಪವಿಭಾಗ, ಬಿಬಿಎಂಪಿ ಹಾಗೂ ಪ್ರಭಾರ ಸಹಾಯಕ ಅಭಿಯಂತರರು ವಾರ್ಡ್ ನಂ:73, ಕೊಟ್ಟಿಗೆಪಾಳ್ಯ, ಬಿಬಿಎಂಪಿ., ಬೆಂಗಳೂರು ರವರು ತಮ್ಮ ದಿನಾಂಕ:3-12-2021 ರ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

6. 2 ಮತ್ತು 3ನೇ ಎದುರುದಾರರಾದ ಶ್ರೀ ಎನ್. ಜಿ.ಉಮೇಶ್ ರವರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುವ ಅಂಶಗಳೇನೆಂದರೆ, ತಾವು ಪ್ರಸ್ತುತ ಯಶವಂತಪುರ

ಉಪವಿಭಾಗ ಕಚೇರಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದು, **ದಿನಾಂಕ:27-10-2018 ರಿಂದ 1-4-2020 ರವರೆಗೆ ಹಾಗೂ ದಿನಾಂಕ:28-12-2020 ರಿಂದ 14-09-2021 ರವರೆಗೆ ಬೆಂಗಳೂರು. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಲಗ್ಗೇರಿ ಉಪವಿಭಾಗ ಕಛೇರಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಅಧಿಕ ಪ್ರಭಾರದಡಿಯಲ್ಲಿ ಕಾರ್ಯನಿರ್ವಹಿಸಿರುವುದಾಗಿ ಹೇಳಿಕೊಂಡಿರುತ್ತಾರೆ.**

7. ಪ್ರಸ್ತುತ ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಅತೀ ಕೆಲಸಗಳ ಒತ್ತಡದಿಂದ ಸಾಧ್ಯವಾಗಿರುವುದಿಲ್ಲ. ತಾವು ಹಾಲಿ ಯಶವಂತಪುರ ಉಪವಿಭಾಗ ಕಛೇರಿಯ ಕಾರ್ಯಭಾರದ ಜೊತೆಗೆ ಇನ್ನೂ ಎರಡು ಉಪವಿಭಾಗಗಳಲ್ಲಿ ಅಧಿಕ ಪ್ರಭಾರದಡಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕ್ರಮವಾಗಿ ಲಗ್ಗೇರಿ ಉಪವಿಭಾಗ ಹಾಗೂ ಗೊರಗುಂಟೆಪಾಳ್ಯ ಉಪವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಹಿಸಿರುವುದಾಗಿ ಹೇಳಿಕೊಂಡಿರುತ್ತಾರೆ. ಈ ಎಲ್ಲಾ ಮೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಒಟ್ಟು 7 ವಾರ್ಡ್‌ಗಳಲ್ಲಿ ಸಹಾಯಕ/ಕಿರಿಯ ಅಭಿಯಂತರರುಗಳು ಇಲ್ಲದೇ ಇರುವುದರಿಂದ ಎಲ್ಲಾ 7 ವಾರ್ಡ್‌ಗಳ ಸಹಾಯಕ ಇಂಜಿನೀಯರ್ ಆಗಿ ಪ್ರಭಾರ ವಹಿಸಿಕೊಂಡು ಕಾರ್ಯನಿರ್ವಹಿಸಿರುವುದಾಗಿ ಹೇಳಿರುತ್ತಾರೆ.

8. ಎದುದುರುದಾರರು ತಮ್ಮ ಮುಂದುವರೆದ ಆಕ್ಷೇಪಣೆಯಲ್ಲಿ ತಾವು ದಿನಾಂಕ: 1-11-2019 ರಂದು ಲಗ್ಗೇರಿ ಉಪವಿಭಾಗ ವಾರ್ಡ್ ನಂ:73 ರ ವ್ಯಾಪ್ತಿಯಲ್ಲಿ ಬರುವ ಸುಮನಹಳ್ಳಿ ಮೇಲ್‌ಸೇತುವೆಯಲ್ಲಿ ಗುಂಡಿ ಕಾಣಿಸಿಕೊಂಡಿದ್ದರಿಂದ ಉಂಟಾದ ಅವಗಡದಿಂದ ಅತೀ ಜವಬ್ದಾರಿಯ ಕಛೇರಿ ಕೆಲಸಗಳು ಉದ್ಭವಗೊಂಡು ಸದರಿ ಮೇಲ್‌ಸೇತುವೆಯಲ್ಲಿನ ಗುಂಡಿ ಮುಚ್ಚುವ ಕಾರ್ಯದ ಜೊತೆಗೆ ಮೇಲ್‌ಸೇತುವೆಯ ರೆನವೇಷನ್ ಕಾಮಗಾರಿಯ ಕೆಲಸಗಳು ಸಾರ್ವಜನಿಕ ಹಿತಾದೃಷ್ಠಿಯಿಂದ ಆದ್ಯತೆಯಾಗಿ ಪರಿವರ್ತನೆಗೊಂಡಿರುತ್ತದೆ ಮತ್ತು ಸದರಿ ಕಾಮಗಾರಿಯು ದಿನಾಂಕ:1-9-2019 ರಿಂದ

ಪ್ರಾರಂಭಗೊಂಡು ದಿನಾಂಕ:1–6–2020ರವರೆಗೆ ಜರುಗಿಸಿರುತ್ತದೆ. ನಂತರ ಕೋವಿಡ್–19 ರ ಸಾಂಕ್ರಮಿಕ ರೋಗಗಳನ್ನು ತಡೆಗಟ್ಟುವ ಸಂಬಂಧ ಸೀಲ್‌ಡೌನ್ ಮಾಡುವ ಕೆಲಸಗಳು, ನಿಯಂತ್ರಿತ ವಲಯಗಳ ನಿರ್ವಹಣೆ, ನಿರಾಶ್ರಿತರಿಗೆ ಆಹಾರದ ಕಿಟ್‌ಗಳನ್ನು ವಿತರಿಸುವುದು ಮತ್ತು ಇತರ ಇಲಾಖೆಗಳ ಅಧಿಕಾರಿಗಳೊಂದಿಗೆ ಸಾಂಕ್ರಮಿಕ ರೋಗವನ್ನು ತಡೆಗಟ್ಟಲು ಕ್ರಮವಹಿಸಿರುವುದಾಗಿ ಹೇಳಿರುತ್ತಾರೆ.

9. ನಂತರ ದಿನಾಂಕ:1–4–2020 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ನೇಮಕಗೊಂಡ ಶ್ರೀ ಭೀಮನಾಯಕ್ ರವರಿಗೆ ಅಧಿಕಾರ ಹಸ್ತಾಂತರಿಸಿರುವುದಾಗಿ, ಶ್ರೀ ಭೀಮನಾಯಕ್ ರವರು ಸದರಿ ಕಛೇರಿಯಿಂದ ದಿನಾಂಕ:28–12–2020 ರಂದು ವರ್ಗಾವಣೆಗೊಂಡ ಹಿನ್ನಲೆಯಲ್ಲಿ ತಾವು ಮತ್ತೊಮ್ಮೆ ದಿನಾಂಕ:28–12–2020 ರಿಂದ ಪ್ರಭಾರವಹಿಸಿಕೊಂಡಿರುವುದಾಗಿ ಹೇಳಿಕೊಂಡಿರುತ್ತಾರೆ.

10. ದಿನಾಂಕ:14–9–2021 ರಂದು ಸದರಿ ಲಗ್ಗೇರಿ ಉಪವಿಭಾಗಕ್ಕೆ ಹೊಸದಾಗಿ ಶ್ರೀ ಹೇಮಂತ್ ಎಂಬುವವರು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ನೇಮಕಗೊಂಡಿದ್ದು ಕಿರಿಯ ಅಭಿಯಂತರರಾಗಿಯೂ ಸಹ ನೇಮಕಗೊಂಡಿರುತ್ತಾರೆ. ಅದರಂತೆ ಸದರಿ ಲಗ್ಗೇರಿ ಉಪವಿಭಾಗದ ಕಛೇರಿಯ ಕಾರ್ಯಭಾರವನ್ನು ದಿನಾಂಕ: 14–09–2021 ರಂದು ಹೊಸದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ನೇಮಕಗೊಂಡ ಶ್ರೀ ಹೇಮಂತ್ ರವರಿಗೆ ಹಸ್ತಾಂತರಿಸಿರುವುದಾಗಿ ಹೇಳಿಕೊಂಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ತಮ್ಮನ್ನು ಪ್ರಸ್ತುತ ಪ್ರಕರಣದಿಂದ ಕೈಬಿಡಬೇಕೆಂದು ಕೋರಿಕೊಂಡಿರುತ್ತಾರೆ.

11. ಪ್ರಸ್ತುತ ಪ್ರಕರಣದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರಸ್ತುತ ದೂರನ್ನು ದೂರುದಾರರು ಈ ಪ್ರಾಧಿಕಾರಕ್ಕೆ ದಿನಾಂಕ:30–11–2019 ರಂದು ಸಲ್ಲಿಸಿರುತ್ತಾರೆ. ದೂರುದಾರರು ತಮ್ಮ ದೂರಿನೊಂದಿಗೆ ಸಲ್ಲಿಸಿರುವ ನೋಟಿಸ್ ಪ್ರತಿಯನ್ನು ಪರಿಶೀಲಿಸಿದಾಗ, ದೂರುದಾರರು ಪ್ರಸ್ತುತ ದೂರನ್ನು ಈ ಪ್ರಾಧಿಕಾರಕ್ಕೆ

ಸಲ್ಲಿಸುವ ಮುಂಚೆ ಪ್ರಸ್ತುತ ಅನಧಿಕೃತ ದೂರು ಕಟ್ಟಡಗಳ ಅಂಶಗಳ ಬಗ್ಗೆ ಲಗ್ಗೇರಿ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ದಿನಾಂಕ:17–08–2019 ರಂದು ದೂರು ನೀಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಂದರೆ, ಪ್ರಸ್ತುತ ದೂರನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸುವ 2 1/2 ತಿಂಗಳ ಹಿಂದೆಯೇ ದೂರುದಾರರು ಲಗ್ಗೇರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ದೂರು ನೀಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

12. ಮೇಲಾಗಿ ಎದುರುದಾರರಾದ ಶ್ರೀ ಉಮೇಶ್ ರವರ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ, ಪ್ರಸ್ತುತ 2ನೇ ಎದುರುದಾರರು ದಿನಾಂಕ:27–10–2018 ರಿಂದ ದಿನಾಂಕ:01–04–2020 ರವರೆಗೆ ಹಾಗೂ ದಿನಾಂಕ:28–12–2020 ರಿಂದ ದಿನಾಂಕ: 14–09–2021 ರವರೆಗೆ ಬಿಬಿಎಂಪಿ., ವ್ಯಾಪ್ತಿಯಲ್ಲಿನ ಲಗ್ಗೇರಿ ಉಪವಿಭಾಗ ಕಛೇರಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಹಾಗೂ ಸಹಾಯಕ ಅಭಿಯಂತರರಾಗಿಯೂ ಕಾರ್ಯನಿರ್ವಹಿಸಿರುವುದು ಸ್ಪಷ್ಟವಾಗಿ ಕಂಡಬರುತ್ತದೆ.

13. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಉಲ್ಲೇಖಿಸಿದಂತಹ ಕೆಲಸದ ಒತ್ತಡಗಳು ದೂರು ಕಟ್ಟಡಕ್ಕೆ ಸಂಬಂಧಪಟ್ಟಂತೆ ದೂರುದಾರರು ಬಿಬಿಎಂಪಿ., ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ದೂರು ನೀಡಿದ ನಂತರ ಸುಮಾರು 3 ತಿಂಗಳು ಗತಿಸಿದ ನಂತರ ಆರಂಭವಾದ ಕೆಲಸ ಕಾರ್ಯಗಳ ಒತ್ತಡಗಳು ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮೇಲಾಗಿ, ಪ್ರಸ್ತುತ ದೂರು ದಾಖಲಿಸುವ ದಿನಾಂಕದಿಂದ ಹಾಗೂ ದೂರುದಾರರು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅನಧಿಕೃತ ದೂರು ಕಟ್ಟಡದ ಬಗ್ಗೆ ದೂರು ನೀಡಿದ ದಿನಾಂಕದ ಸುಮಾರು 1 ವರ್ಷದ ಮುಂಚೆಯಿಂದಲೇ 2ನೇ ಎದುರುದಾರರಾದ ಶ್ರೀ ಉಮೇಶ್ ರವರು ಲಗ್ಗೇರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಹಾಗೂ ಪ್ರಭಾರ

ಸಹಾಯಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

14. ಈ ಎಲ್ಲಾ ಕಾರಣಗಳಿಂದ ಕೆಲಸದ ಒತ್ತಡದಿಂದಾಗಿ, ನಿರ್ದಿಷ್ಟ ಸಮಯದಲ್ಲಿ ದೂರು ಅನಧಿಕೃತ ಕಟ್ಟಡಕ್ಕೆ ಸಂಬಂಧಪಟ್ಟಂತೆ ಕ್ರಮ ಜರುಗಿಸಲು ಸಾಧ್ಯವಾಗಿಲ್ಲ ಎನ್ನುವ ಎದುರುದಾರರ ಪ್ರತಿಪಾದನೆ ಒಪ್ಪಿಕೊಳ್ಳಲು ಆಗುವುದಿಲ್ಲ.

15. ಮೇಲೆ ಚರ್ಚಿಸಿದ ಕಾರಣಗಳಿಂದಾಗಿ, ಬಿಬಿಎಂಪಿ., ಆಯುಕ್ತರವರ ಕಛೇರಿಯ ಸಂಬಂಧಪಟ್ಟ ಸುತ್ತೋಲೆ ಹಾಗೂ ಕಛೇರಿ ಆದೇಶವನ್ನು ಉಲ್ಲೇಖಿಸುವುದು ಅವಶ್ಯಕವೆನಿಸುತ್ತದೆ. ಬಿಬಿಎಂಪಿ., ಆಯುಕ್ತರವರು ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಷನ್ ಆಕ್ಟ್, 1976 ರ ಕಲಂ 67 ರಲ್ಲಿ ನಿಹಿತವಾದ ಅಧಿಕಾರವನ್ನು ಬಳಸಿ ದಿನಾಂಕ:7-8-2015 ರಂದು ಹೊರಡಿಸಿರುವ ಕಂಡಿಕೆ-3 ಮತ್ತು 4 ರ ಸುತ್ತೋಲೆ ಈ ಕೆಳಕಂಡಂತೆ ಇರುತ್ತದೆ.

> "ಪಾಲಿಕೆಯು ಎಲ್ಲಾ ರೀತಿಯಲ್ಲಿಯೂ ಕ್ರಮ ಜರುಗಿಸುತ್ತಿರುವಾಗಲೂ ಕೂಡ ಅನಧಿಕೃತ/ನಕ್ಷೆ ಮಂಜೂರಾತಿ ಉಲ್ಲಂಘನೆ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸಲು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.
>
> ಈ ಹಿನ್ನಲೆಯಲ್ಲಿ ಕೆಳಕಂಡ ಮೂರು ಕ್ರಮಗಳನ್ನು ಇಂತಹ ಎಲ್ಲಾ ಪ್ರಕರಣಗಳಲ್ಲಿ ತೆಗೆದುಕೊಳ್ಳಲು ಉಪ ವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ಸೂಚಿಸಿದೆ. ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡಗಳ ತಳಪಾಯ ತೋಡುವ ಹಂತದಿಂದಲೂ ಕಟ್ಟಡಗಳ ನಿರ್ಮಾಣದ ಬಗ್ಗೆ

ಗಮನಹರಿಸಿ, ಕಾಲಕಾಲಕ್ಕೆ ಕಟ್ಟಡದ ಹಂತಗಳ ಬಗ್ಗೆ ಕಛೇರಿ ಕಡತದಲ್ಲಿ ನಮೂದಿಸತಕ್ಕದ್ದು.

ಕ್ರಮ 1:. . . . . . . . .

16. ಬಿಬಿಎಂಪಿ., ಆಯುಕ್ತರವರ ದಿನಾಂಕ:29–06–2015 ರ ಕಛೇರಿ ಆದೇಶ ಈ ಕೆಳಕಂಡಂತೆ ಇರುತ್ತದೆ.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆಗೆ ವಿರುದ್ದವಾಗಿ/ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ, ವ್ಯತಿರಿಕ್ತ ನಿರ್ಮಾಣ ಕಂಡುಬಂದಲ್ಲಿ ಕ್ರಮವಹಿಸುವ ಅಧಿಕಾರ ಪ್ರತ್ಯಾಯೋಜನೆಯ ಉಲ್ಲೇಖದ ಕಛೇರಿ ಆದೇಶ ಹಾಗೂ ಹಿಂದಿನ ಎಲ್ಲಾ ಸುತ್ತೋಲೆ/ಕಛೇರಿ ಆದೇಶಗಳನ್ನು ರದ್ದುಪಡಿಸಲಾಗಿದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ 28 ವಿಭಾಗಗಳ ಕಾರ್ಯನಿರ್ವಾಹಕ ಅಭಿಯಂತರರುಗಳು ಮತ್ತು 64 ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳು ಕಾರ್ಯನಿರ್ವಹಿಸುವ ವಿಭಾಗ/ಉಪವಿಭಾಗದ ವ್ಯಾಪ್ತಿಯಲ್ಲಿ, ಮಂಜೂರಾತಿ ಪಡೆದು ನಿರ್ಮಿಸುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ, ಮಂಜೂರಾತಿ ನಕ್ಷೆಗೆ ವ್ಯತಿರಿಕ್ತ ನಿರ್ಮಾಣ ಅಥವಾ ಅನಧಿಕೃತ ನಿರ್ಮಾಣ ಕಂಡುಬಂದಲ್ಲಿ ಕೆ.ಎಂ.ಸಿ. ಕಾಯ್ದೆ, 1976 ರ ಸೆಕ್ಷನ್ 321(1) ರಂತೆ ತಾತ್ಕಾಲಿಕ ಆದೇಶ, 321(2) ರಂತೆ ಕಾರಣ ಕೇಳಿ ಪತ್ರ ಮತ್ತು 321(3) ರಂತೆ ಸ್ಥಿರೀಕರಣ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ

ಹಾಗೂ ಸೆಕ್ಷನ್ 462 ರಂತೆ ವ್ಯತಿರಿಕ್ತ ನಿರ್ಮಾಣ ಅಥವಾ ಅನಿಧಿಕೃತ ನಿರ್ಮಾಣ ತೆರವುಗೊಳಿಸುವ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಪ್ರತ್ಯೋಯೋಜನೆಯನ್ನು ನೀಡಿ ಆದೇಶಿಸಲಾಗಿದೆ."

17. ಮೇಲ್ಕಂಡ ಬಿಬಿಎಂಪಿ., ಆಯುಕ್ತವರ ಸುತ್ತೋಲೆ ಹಾಗೂ ಕಛೇರಿಯ ಆದೇಶವನ್ನು ಪರಿಶೀಲಿಸಿದಾಗ, ಅನಧಿಕೃತ/ನಕ್ಷೆ ಮಂಜೂರಾತಿ ಉಲ್ಲಂಘನೆ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸುವ ಅಧಿಕಾರ ಸಂಬಂಧಪಟ್ಟ ಉಪವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಲಾಗಿರುತ್ತದೆ.

18. ಹೀಗಾಗಿ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದಾಗಿ, 2 ಮತ್ತು 3ನೇ ಎದುರುದಾರರಾದ ಶ್ರೀ ಎನ್.ಜಿ. ಉಮೇಶ್ ರವರು ದೂರು ಕಟ್ಟಡದ ಸಮಯದಲ್ಲಿ ಹಾಗೂ ಪ್ರಸ್ತುತ ದೂರು ಸಲ್ಲಿಸಿರುವ ಸುಮಾರು 1 ವರ್ಷದ ಹಿಂದೆಯಿಂದಲೂ ಲಗ್ಗೇರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಹಾಗೂ ಪ್ರಭಾರ ಸಹಾಯಕ ಅಭಿಯಂತರರಾಗಿ ವಾರ್ಡ್ ನಂ:73, ಕೊಟ್ಟಿಗೆಪಾಳ್ಯ, ಬಿಬಿಎಂಪಿ., ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸಿದ್ದರೂ ಸಹ ಬಿಬಿಎಂಪಿ., ಕಾಯ್ದೆ ಅನ್ವಯ ಅನಧಿಕೃತವಾಗಿ, ಕಾನೂನು ಬಾಹಿರವಾಗಿ ಹಾಗೂ ಬಿಬಿಎಂಪಿ., ನಿಯಮಗಳನ್ನು ಉಲ್ಲಂಘಿಸಿ ಕಟ್ಟುತ್ತಿರುವ ಕಟ್ಟಡದ ಬಗ್ಗೆ ಯಾವುದೆ ಕಾನೂನು ಕ್ರಮ ಕೈಗೊಳ್ಳದೇ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

19. 1ನೇ ಎದುರುದಾರಾದ ಕಾರ್ಯಪಾಲಕ ಅಭಿಯಂತರರು ಶ್ರೀ ಶ್ರೀನಿವಾಸ ರವರು ದಿನಾಂಕ:17–05–2020 ರಂದು ಮೃತಪಟ್ಟಿರುತ್ತಾರೆಂಬುದು ಸದರಿಯವರ ಮರಣ ಪ್ರಮಾಣ ಪತ್ರದ ಪ್ರತಿಯಿಂದ ಕಂಡುಬರುತ್ತದೆ. ಆದ್ದರಿಂದ ಸದರಿಯವರ ವಿರುದ್ಧ ಕ್ರಮಜರುಗಿಸಲು ಸಾಧ್ಯವಾಗದ ಕಾರಣ ಪ್ರಕರಣದಿಂದ ಕೈಬಿಡಬಹುದಾಗಿದೆ.

20. ಮೇಲೆ ವಿವರಿಸಿದ ಕಾರಣಗಳಿಂದಾಗಿ, 2 ಮತ್ತು 3ನೇ ಎದುರುದಾರರಾದ ಶ್ರೀ ಎನ್.ಜಿ. ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೇರಿ ಉಪವಿಭಾಗ, ಬಿಬಿಎಂಪಿ ಹಾಗೂ ಪ್ರಭಾರ ಸಹಾಯಕ ಅಭಿಯಂತರರು ವಾರ್ಡ್ ನಂ:73, ಕೊಟ್ಟಿಗೆಪಾಳ್ಯ, ಬಿಬಿಎಂಪಿ., ಬೆಂಗಳೂರು (2 ಮತ್ತು 3ನೇ ಎದುರುದಾರರು ಒಂದೇ ವ್ಯಕ್ತಿ ಆಗಿರುತ್ತಾರೆ) ರವರ ಕೃತ್ಯವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ಕಲಂ 3 (I) (i), (ii) & (iii) [ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966] ರಂತೆ ದುರ್ನಡತೆಯಾಗಿರುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿ ಎದುರುದಾರರ ವಿರುದ್ಧ ಕ.ಸ.ಸೇ.ನಿ ಗಳ ಅಡಿಯಲ್ಲಿ ಶಿಸ್ತು ಕ್ರಮವನ್ನು ಶಿಸ್ತು ಪ್ರಾಧಿಕಾರದ ಮೂಲಕ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3)ರ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

21. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ಅನುಸರಣ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

30/4/22

[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.